ಸಿಹಿಪಾಕ ಹನಿಸುವ ಗ್ಲ್ಯಾಮರ್ ಪಾತ್ರದಲ್ಲಿಯೂ ಅವರು ನಟಿಸುತ್ತಿದ್ದಾರೆ. ಈ ಎರಡೂ ತುದಿಗಳ ನಡುವೆ 'ಬುದ್ಧಿವಂತ 2', 'ಶಂಭೋ ಶಂಕರ', 'ನಟ್ವರ್‌ಲಾಲ್', 'ತಲ್ವಾರ್ ಪೇಟೆ', 'ಗಾಜನೂರು', 'ಭಗವಾನ್ ಶ್ರೀಕೃಷ್ಣ ಪರಮಾತ್ಮ', ಹೀಗೆ ಹಲವು ಪಾತ್ರಗಳ ಕಾಮನಬಿಲ್ಲು ಮೂಡಿಸಲು ಅವರು ಸಜ್ಜಾಗಿದ್ದಾರೆ.

'ಕಳೆದ ವರ್ಷ ಈ ಹೊತ್ತಿಗೆ ನಾವೆಲ್ಲರೂ ಆತಂಕದಲ್ಲಿದ್ದೆವು. ಏನಾಗುತ್ತೋ ಏನೋ ಎಂಬ ಹೆದರಿಕೆ ಇತ್ತು. ಥ್ಯಾಂಕ್ ಗಾಡ್.... ಈಗ ಎಲ್ಲವೂ ಸಹಜ ಸ್ಥಿತಿಗೆ ಮರಳುತ್ತಿದೆ. ಮತ್ತೆ ಸಿನಿಮಾ ಇಂಡಸ್ಟ್ರಿ ಮೊದಲಿನ ಹಾಗೆ ಚೇತರಿಸಿಕೊಳ್ಳುತ್ತಿದೆ. ಚಿತ್ರರಂಗಕ್ಕೆ ಕಾಲ್‌ಶೀಟ್ ಕೇಳುತ್ತಿದ್ದಾರೆ. ಇವೆಲ್ಲವನ್ನೂ ನೋಡಿ ಖುಷಿಯಾಗುತ್ತಿದೆ' ಎಂದು ಸಮಾಧಾನದ ನಿಟ್ಟುಸಿರು ಬಿಡುತ್ತಾರೆ ಅವರು.

ಈಗ ಅವರು ನಟಿಸುತ್ತಿರುವ ಸಿನಿಮಾಗಳಲ್ಲಿ ಹಲವು ಸಿನಿಮಾಗಳು 2020ರಲ್ಲಿಯೇ ಮುಗಿಯಬೇಕಾಗಿದ್ದವು. ಆದರೆ ಕೊರೊನಾ ಕಾರಣಕ್ಕೆ ಚಿತ್ರೀಕರಣ ಸಾಧ್ಯವಾಗದೆ ಉಳಿದುಕೊಂಡಿವೆ. ಈಗ ಮತ್ತೆ ಒಟ್ಟೊಟ್ಟಿಗೇ ಚಿತ್ರೀಕರಣ ಆರಂಭಿಸಿರುವುದು ಸಹಜವಾಗಿಯೇ ಧಾವಂತ ಹುಟ್ಟಿಸಿದೆ. ಆದರೆ ಕೆಲಸದಲ್ಲಿಯೇ ಖುಷಿಯನ್ನು ಕಾಣುವುದು ಸೋನಲ್ ಸ್ವಭಾವ. ಹಾಗೆಯೇ ಸಿಕ್ಕ ಅವಕಾಶಗಳನ್ನೆಲ್ಲ ಒಪ್ಪಿಕೊಳ್ಳುವುದೂ ಅವರಿಗೆ ಒಗ್ಗದ್ದು. 'ನಾನು ಮೊದಲಿನಿಂದಲೂ ಚ್ಯೂಸಿಯಾಗಿಯೇ ಇದ್ದೇನೆ. ಒಂದು ಪಾತ್ರದಲ್ಲಿ ನಟಿಸುವ ಅವಕಾಶ ಬಂದಾಗ, ಇದು ನನ್ನಿಂದ ಸಾಧ್ಯವೇ ಎಂದು ಮೊದಲು ಕೇಳಿಕೊಳ್ಳುತ್ತೇನೆ. ಸವಾಲಿನ ಪಾತ್ರಗಳಲ್ಲಿ ನಟಿಸುವುದು ನನಗೆ ಇಷ್ಟ. ಆದರೆ ನನಗೆ ಒಗ್ಗದ ಪಾತ್ರಗಳಿದ್ದರೆ ಒಪ್ಪಿಕೊಳ್ಳುವುದಿಲ್ಲ' ಎನ್ನುವುದು ಅವರ ಸ್ಪಷ್ಟ ನಿಲುವು.

ಈಗ 'ಬನಾರಸ್' ಸಿನಿಮಾ ತನಗೆ ಹೊಸದೊಂದು ಇಮೇಜ್ ಕೊಡುತ್ತದೆ ಎಂಬ ನಿರೀಕ್ಷೆಯಲ್ಲಿ ಅವರು ಕಾಯುತ್ತಿದ್ದಾರೆ. 'ನನಗೆ ಜಯತೀರ್ಥ ಅವರ ಸಿನಿಮಾದಲ್ಲಿ ನಟಿಸಬೇಕು ಎಂಬ ಆಸೆ ಮೊದಲಿನಿಂದಲೂ ಇತ್ತು. ಬೆಲ್ ಬಾಟಂ ಸಿನಿಮಾದಲ್ಲಿ ನಾನು ನಟಿಸಬೇಕಾಗಿತ್ತು. ಆದರೆ ಅನಿವಾರ್ಯ ಕಾರಣಗಳಿಂದ ನಟಿಸಲಾಗಲಿಲ್ಲ. ಬನಾರಸ್ ಸಿನಿಮಾ ತುಂಬ ಚೆನ್ನಾಗಿ ಬಂದಿದೆ. ಅದನ್ನು ನೋಡಲು ಸ್ವತಃ ನಾನೇ ಕಾತರದಿಂದ ಕಾಯುತ್ತಿದ್ದೇನೆ' ಎಂದು ಉತ್ಸುಕತೆಯಿಂದ ಹೇಳುತ್ತಾರೆ.

ಸಿನಿಮಾ ಸೋನಲ್ ಅವರ ಕನಸಿನ ದಾರಿ. ಅದರಲ್ಲಿನ ನಡಿಗೆಯ ಖುಷಿಯಲ್ಲಿ ಅವರಿದ್ದಾರೆ. ಈ ಖುಷಿಯ ದಾರಿಯಲ್ಲಿ ತಿರುವಿನಾಚೆ ಎದುರಾಗುವ ಅನಿರೀಕ್ಷಿತ ಖುಷಿಗಳನ್ನೂ ಅವರು ಎದುರು ನೋಡುತ್ತಿದ್ದಾರೆ.

# ಕನ್ನಿಕೇರಿ ಹುಡುಗಿಯ ಹೊಸ ನಡಿಗೆ



ಹಳೆ ಮದ್ಯವನ್ನು ಹೊಸ ಬಾಟಲಿಯಲ್ಲಿ ಇಟ್ಟು ಕೊಡುವುದು ಜನಪ್ರಿಯ ಸೂತ್ರ. ಈ ಸೂತ್ರದಡಿಯಲ್ಲಿಯೇ ಹಲವು ಜನಪದ ಹಾಡುಗಳು ಹೊಸ ಹೊಸ ರೂಪದಲ್ಲಿ ಮತ್ತೆ ಜನರ ಕಿವಿಗಳಲ್ಲಿ ರಿಂಗಣಿಸುತ್ತಿದೆ. ಈ ಸಾಲಿಗೆ ಹೊಸ ಸೇರ್ಪಡೆ 'ಕನ್ನಿಕೇರಿ ಹುಡುಗಿ' ಎಂಬ ಜನಪದ ಹಾಡು.

ನಿರೂಪಕಿಯಾಗಿ ಹೆಸರು ಮಾಡಿರುವ ದಿವ್ಯಾ ಆಲೂರು ಈ ಹಾಡನ್ನು ಹೊಸ ರೂಪದಲ್ಲಿ ಜನರ ಎದುರು ಇಡುತ್ತಿದ್ದಾರೆ. ಸ್ವತಃ ಅವರೇ ಈ ಹಾಡನ್ನು ಹಾಡಿ, ಹಾಡಿನಲ್ಲಿ ಅಭಿನಯಿಸಿದ್ದಾರೆ ಕೂಡ. ಹೀಗೆ ಹಳೇ ಜಾನಪದ ಹಾಡಿಗೆ ಹೊಸ ರೂಪ ಕೊಡುವ ಆಲೋಚನೆಯನ್ನು ದಿವ್ಯಾ ಅವರ ಮನಸಲ್ಲಿ ತುಂಬಿದ್ದು ಅವರ ಪತಿ ಆದರ್ಶ್ ಅವರು. ಪ್ರಶಾಂತ್ ಕುಮಾರ್ ಈ ವಿಡಿಯೊ ಸಾಂಗ್ ಅನ್ನು ನಿರ್ದೇಶಿಸಿದ್ದಾರೆ. ಅರುಣ್ ಆ್ಯಂಡ್ರ್ಯೂ ಸಂಗೀತ, ರಾಜಶೇಖರ್ ಛಾಯಾಗ್ರಹಣ ಮತ್ತು ವಿಶ್ವ ಅವರ ಸಂಕಲನ ಈ ಚಿತ್ರಕ್ಕಿದೆ.

ಸುಂದರ ಹುಡುಗಿಯೊಬ್ಬಳು ಹಳ್ಳಿಯ ಸಂತೆರಸ್ತೆಯಲ್ಲಿ ನಡೆದು ಹೋಗುತ್ತಿದ್ದಾಗ ಜನರು ಅವಳನ್ನು ಆಸೆಗಣ್ಣಿನಿಂದ ನೋಡುವುದು, ಅದಕ್ಕೆ ಅವಳು ಸೊಪ್ಪು ಹಾಕದೆ ನಡೆದುಕೊಂಡು ಹೋಗುವುದು, ನಂತರ ಅವಳು ಸುಂದರ ಹುಡುಗನೊಬ್ಬನಿಗೆ ಮನಸೋಲುವ ಪ್ರೇಮಕಥೆ ಈ ಹಾಡಿನಲ್ಲಿ ಚಿತ್ರಿತವಾಗಿದೆ.

# ಪ್ರಶಸ್ತಿಗಳ ದಾರಿ



ಚಿತ್ರಮಂದಿರಗಳಲ್ಲಿ ಸಿನಿಮಾವೊಂದು ಶತದಿನ ಪ್ರದರ್ಶನ ಕಾಣುವುದು ಕನಸೇ ಸರಿ ಎಂಬಂಥ ವಾತಾವರಣವಿದೆ. ಆದರೆ ಸಿದ್ದು ಪೂರ್ಣಚಂದ್ರ ನಿರ್ದೇಶನದ 'ದಾರಿ ಯಾವುದಯ್ಯಾ ವೈಕುಂಠಕೆ' ಸಿನಿಮಾ ಪ್ರಶಸ್ತಿಗಳಲ್ಲಿಯೇ ಶತಕ ಬಾರಿಸಿದೆ. ಹತ್ತು ಹಲವು ಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಂಡಿರುವ ಈ ಸಿನಿಮಾ 130ಕ್ಕೂ ಅಧಿಕ ಪ್ರಶಸ್ತಿಗಳನ್ನು ಪಡೆದುಕೊಂಡಿದೆ ಎಂದು ಚಿತ್ರತಂಡ ಹೇಳಿಕೊಂಡಿದೆ.

ಲಾಕ್‌ಡೌನ್ ಸಮಯದಲ್ಲಿ ತುಸು ವಿರಾಮ ಪಡೆದಿದ್ದ ಈ ಸಿನಿಮಾ ಈಗ ಮತ್ತೆ ಪ್ರಶಸ್ತಿಗಳ ಓಟ ಮುಂದುವರಿಸಿದೆ. ಇತ್ತೀಚೆಗೆ ಜಾರ್ಖಂಡ್‌ನ ರಾಂಚಿಯಲ್ಲಿ ನಡೆದ ಜಾರ್ಖಂಡ್ ಅಂತರರಾಷ್ಟ್ರೀಯ ಸಿನಿಮೋತ್ಸವದಲ್ಲಿ 'ದಾರಿ ಯಾವುದಯ್ಯಾ ವೈಕುಂಠಕೆ' ಚಿತ್ರ ಪ್ರದರ್ಶನಗೊಂಡು 'ಬೆಸ್ಟ್ ಫೀಚರ್ ಫಿಲ್ಮ್' ಪ್ರಶಸ್ತಿಯನ್ನು ಪಡೆದುಕೊಂಡಿದೆ.

ಕಳ್ಳ, ಹೆಣ ಸುಡುವ ವ್ಯಕ್ತಿ, ಅವನ ನಾಯಿ, ಗರ್ಭಿಣಿ ಹೆಣ್ಣು –ಹೀಗೆ ವಿಭಿನ್ನ ಪಾತ್ರಗಳ ಬದುಕನ್ನು ಏಕಸೂತ್ರದಲ್ಲಿ ಕಟ್ಟಿಕೊಡುವ ಈ ಸಿನಿಮಾ, ಅವರ ಬದುಕನ್ನು ಕಲಕುವ ವ್ಯವಸ್ಥೆಯ ಕ್ರೌರ್ಯಗಳನ್ನೂ ಅನಾವರಣಗೊಳಿಸುತ್ತದೆ.

ಸಿದ್ದು ಪೂರ್ಣಚಂದ್ರ ನಿರ್ದೇಶಿಸಿರುವ ಈ ಚಿತ್ರಕ್ಕೆ ಶರಣಪ್ಪ ಎಂ. ಕೊಟಗಿ ಹಣ ಹೂಡಿದ್ದಾರೆ. ವರ್ಧನ್, ಪೂಜಾ, ಬಲ ರಾಜ್ವಾಡಿ, ಶಿಬಾ ಮೂರ್ತಿ ತಾರಾಗಣದಲ್ಲಿದ್ದಾರೆ.